ಓಎಸ್ ೫5/12

ಡಿ ಡಬ್ಲ್ಯೂಃ 01.

**ದಿನಾಂಕಃ 9/3/2018 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**<u>ಪಾಟೀ ಸವಾಲುಃ ವಾದಿಗಳ ಪರ ವಕೀಲರಿಂದಃ ಶ್ರೀ ಸಿ.ಎಸ್.ಎಸ್ ವಕೀಲರಿಂದಃ</u>**

ಪ್ರತಿವಾದಿ 1 ಮತ್ತು 2 ಲೇಟ್ ಬಸಪ್ಪನವರ ಹೆಂಡತಿ ಮತ್ತು ಮಗ ಎಂದರೆ ಸರಿ. 3 ನೇ ಪ್ರತಿವಾದಿ ಪುಟ್ಟಪ್ಪನವರು ನನ್ನ ತಂದೆ. 4 ನೇ ಪ್ರತಿವಾದಿ ಅಂದರೆ ನಾನೇ, 5 ಮತ್ತು 6 ನೇ ಪ್ರತಿವಾದಿ ಪುಟ್ಟಯ್ಯ ಎನ್ನುವವರ ಮಕ್ಕಳು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು, ಅವರು ನಮ್ಮ ಮನೆಯ ಪಕ್ಕದವರು ಮತ್ತು ದಾಯಾದಿಗಳಾಗಬೇಕು. ನಾನು ಹುಟ್ಟಿದಾಗಿನಿಂದಲೂ ಅವರು ನಮ್ಮ ಮನೆಯ ಪಕ್ಕದಲ್ಲಿ ವಾಸವಾಗಿದ್ದಾರೆ. 5 ಮತ್ತು 6 ನೇ ಪ್ರತಿವಾದಿಗಳು ನಮಗೆ ಚಿಕ್ಕಪ್ಪಂದಿರಾಗಬೇಕು. ಸ.ನಂ.52/1 , 37 ಗುಂಟೆ ಜಮೀನು, ಸನಂ53/1 23 ಗುಂಟೆ , 53/3 , 21 ಗುಂಟೆ , 53/8 38 ಗುಂಟೆ ಜಮೀನುಗಳು ಹಾಲಯ್ಯನಿಗೆ ಸೇರಿದ ಜಮೀನಾಗಿದ್ದು ಅವು ನಮ್ಮ ಪಿತ್ರಾರ್ಜಿತ ಜಮೀನುಗಳು ಎಂದರೆ ಹೌದು. ಹಾಲಯ್ಯ ಆಡಿಗನಹಳ್ಳಿ ಗ್ರಾಮದವರು . ಹಾಲಯ್ಯನವರು ತೀರಿಕೊಂಡ ನಂತರ ಪೌತಿ ಖಾತೆ ಬಸಪ್ಪನವರ ಹೆಸರಿಗೆ ಆಯಿತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಹೆಸರಿಗೆ ಆಗಿರುತ್ತದೆ ಎಂದಿದ್ದಾರೆ. ಹಾಲಯ್ಯನವರಿಗೆ ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ಅವರು ಬಸಪ್ಪ ಮತ್ತು ಪುಟ್ಟಪ್ಪ ಎಂದರೆ ಸರಿ. ಹಾಲಯ್ಯನವರು ತೀರಿಕೊಂಡಾಗ ಅವರ ಜಮೀನುಗಳೆಲ್ಲ ಬಸಪ್ಪ ಮತ್ತು ಪುಟ್ಟಪ್ಪನವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ದಿಃ 18/11/2004 ರಂದು ಮಹದೇವಮ್ಮ ಮೃತ ಬಸಪ್ಪನವರ ಪರವಾಗಿ ಮತ್ತು ನನ್ನ ತಂದೆ ಪುಟ್ಟಪ್ಪ ಸೇರಿಕೊಂಡು ತಮ್ಮ ಒಟ್ಟು ಕುಟುಂಬದ ಆಸ್ತಿಗಳೆಲ್ಲಾ ನೊಂದಾಯಿತ ರಿಜಿಸ್ಟರ್ ವಿಭಾಗ ಪತ್ರದ ಮುಖಾಂತರ ವಿಭಾಗ ಮಾಡಿಕೊಂಡಿದ್ದಾರೆಂದರೆ ಸರಿ. ಮೇಲ್ಕಂಡ ವಿಭಾಗ ಪತ್ರದಲ್ಲಿ ಸನಂ.53/3 ರ 10 ವರೆ ಗುಂಟೆ , 53/8 ರ 38 ಗುಂಟೆ ಜಮೀನು ಮಹದೇವಮ್ಮ ಮತ್ತು ಪುಟ್ಟಬಸಪ್ಪನವರ ಪಾಲಿಗೆ ಕೊಟ್ಟಿದೆ ಎಂದರೆ ಸರಿ. ಸ.ನಂ.53/3 ರಲ್ಲಿ 10 ವರೆ ಗುಂಟೆ ಜಮೀನು ನನ್ನ ತಂದೆ ಪುಟ್ಟಪ್ಪನವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ನೊಂದಾಯಿತ ಕ ವಿಭಾಗ ಪತ್ರದಲ್ಲಿ ನಮೂದಿರುವ ಸನಂ.53/3 ಅದು ವಾಸ್ತವವಾಗಿ ಸ.ನಂ.52/1 ಆಗಬೇಕು ಎಂದರೆ ಸರಿಯಲ್ಲ. ಸ.ನಂ.52/1 ರಲ್ಲಿ ಬಸಪ್ಪ ಮತ್ತು ನನ್ನ ತಂದೆ ಪುಟ್ಟಪ್ಪನವರು ಸಮವಾಗಿ ಹಂಚಿಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಆ

ಕಾರಣಕ್ಕಾಗಿ ಸ.ನಂ.52/1 ರಲ್ಲಿ 18 ವರೆ ಗುಂಟೆ ಜಮೀನು ನನ್ನ ತಂದೆಗೆ ವಿಭಾಗ ಪತ್ರದ ಮೂಲಕ ಬಂದಿರುತ್ತದೆ ಎಂದರೆ ಸರಿಯಲ್ಲ. ಸ.ನಂ.53/8 ರ 38 ಗುಂಟೆ ಜಮೀನು ಅದು ವಾಸ್ತವವಾಗಿ ಅದು ಸ.ನಂ.53/1 ವಿ. 16 ಗುಂಟೆ ಜಮೀನು ಎಂದರೆ ಸರಿಯಲ್ಲ. ಸ.ನಂ.53/1 ಮತ್ತು 53/3 ಒಟ್ಟು 37 ಗುಂಟೆ ಜಮೀನು ಹಂಚಿಕೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಪೂಃ ವಾದಿ ಜಮೀನು ಪಃ ಸರ್ಕಾರಿ ಓಣಿ , ಉಃ ಪುಟ್ಟಪ್ಪನವರ ದಃ ವೆಂಕಟೇಶ್ ರವರ ಜಮೀನು ಈ ಚಕ್ಕು ಬಂದಿ ಸ.ನಂ.52/1 ರ ಜಮೀನಿಗೆ ಅನ್ವಯಿಸುತ್ತದೆ ಎಂದರೆ ಸರಿಯಲ್ಲ. ಪೂಃ ವೆಂಕಟೇಶ ಮತ್ತು ಇತರೆಯವರ ಜಮೀನು, ಪಃ ಸರ್ಕಾರಿ ಓಣಿ ಉಃ ಅಪ್ಪಣ್ಣ ಮತ್ತು ವಾದಿಯವರ ಜಮೀನು , ದಃ ವೆಂಕಟೇಶ್ ರವರ ಜಮೀನು ಈ ಚಕ್ಕುಬಂದಿ ಸ.ನಂ.53/3 ಕ್ಕೆ ಅನ್ವಯಿಸುತ್ತದೆ ಸ.ನಂ.53/8 ಕ್ಕೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ. 18/11/04 ರಂದು ಮಾಡಿಕೊಂಡಿರುವ ವಿಭಾಗ ಪತ್ರ ಕಾನೂನು ಬದ್ದವಾಗಿದೆಯಾ ಎಂದರೆ ಸಾಕ್ಷಿಯು ಕಾನೂನು ಬದ್ದವಾಗಿ ಪತ್ರವನ್ನು ಮಾಡಿದ್ದು ಸಾಕ್ಷಿ ಮುಂದುವರೆದು ಸ.ನಂ.53/3 ರಲ್ಲಿ 10 ವರೆ ಗುಂಟೆ , ಸ.ನಂ.52/7 ರಲ್ಲಿ 38 ಗುಂಟೆ ನಮ್ಮ ಹೆಣ್ಣು ಮಕ್ಕಳಿಗೆ 6 ಭಾಗ ಆಗಿದೆ ಎಂದಿದ್ದಾರೆ . 18/11/04 ರಂದು ಆಗಿರುವ ವಿಭಾಗ ಪತ್ರದ ಮೂಲಕ ಜಮೀನುಗಳು ಹಂಚಿಕೆಯ ಪ್ರಕಾರ ಅನುಭವಿಸುತ್ತಿದ್ದೀರಾ ಎಂದರೆ ಸಾಕ್ಷಿಯು ಅನುಭವಿಸುತ್ತಿದ್ದೇವೆ. ಸದರಿ ವಿಭಾಗ ಪತ್ರ ತಪ್ಪಾಗಿದ್ದು ಅದು ಮೋಸದಿಂದ ಮಾಡಿಕೊಂಡಿರುತ್ತಾರೆಂದು ನಾನು ಯಾವುದೇ ದಾವೆ ಹೂಡಿರುತ್ತೇನೆ. ಸದರಿ ದಾವೆ ಅ.ದಾ ಸಂ. 50/2006 ಆಗಿರುತ್ತದೆ. ಸದರಿ ದಾವೆ ತೀರ್ಮಾನ ಆಗಿರುತ್ತದೆ. ಸದರಿ ದಾವೆ 2010 ನೇ ಇಸವಿಯಲ್ಲಿ ತೀರ್ಮಾನ ಆಗಿರುತ್ತದೆ. ಸದರಿ ವಿಚಾರವನ್ನು ನನ್ನ ಲಿಖಿತ ಹೇಳಿಕೆಯಲ್ಲಿ ಬರೆಸಿಲ್ಲ. ಸದರಿ ತೀರ್ಪಿನ ಪ್ರತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ಸದರಿ ತೀರ್ಪನ್ನು ನ್ಯಾಯಾಲಯದ ಮುಂದೆ ಹಾಜರ್ಪಡಿಸಲು ತೊಂದರೆ ಇಲ್ಲ. 3 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯಲು ಯಾವುದೇ ತೊಂದರೆ ಇಲ್ಲ. ಸದರಿ ಜಮೀನುಗಳ ಬಗ್ಗೆ ಚೆನ್ನಾಗಿ ನನಗೆ ತಂದೆಗೆ ಗೊತ್ತಿದೆ ಎಂದರೆ ಸರಿ. ನನ್ನ ತಂದೆಯವರು ತೀರಿಕೊಂಡು 5 ವರ್ಷಗಳಾಗಿರುತ್ತವೆ.

ಡಿ ಡಬ್ಲ್ಯೂ: 01.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.